

ಲಾಕ್‌ಡೌನ್ ಸಮಯದಲ್ಲಿ ಗಡಿಯಾರದ ಅಂಗಡಿಗೆ ಹೋದ ಗುಂಡ 'ಸರ್....ನಿಮ್ಮಲ್ಲಿ ಸ್ಟಾಪ್ ವಾಚ್ ಇದೆಯಾ?'
ಅಂಗಡಿಯಾತ: ಸ್ಪೋರ್ಟ್ಸ್‌ನಲ್ಲಿ ಬಳಸುವುದಕ್ಕಾ?
ಗುಂಡ: ಇಲ್ಲ... ಕೈ ತೊಳೆಯೋಕೆ ಬೇಕಾಗಿದೆ.
ಅಂಗಡಿಯಾತ: ಹಾಗೆಂದರೇನು ಸಾರ್? ಸ್ಟಾಪ್‌ವಾಚ್‌ನಲ್ಲಿ ಕೈ ತೊಳಿಯೋಕಾಗುತ್ತಾ?
ಗುಂಡ: ಬೇಜಾರ್ ಮಾಡ್ಕೋಬೇಡಿ... 20 ಸೆಕಂಡ್ ಕೈ ತೊಳೀಬೇಕು ಅಂತಾರಲ್ಲ, ಅದಕ್ಕೆ ಕೇಳಿದೆ.

***

ಪೊಲೀಸ್: ಕೊರೊನಾ ಮಾಸ್ಕ್ ಎಲ್ಲಿ 200 ರೂ. ದಂಡ ಕಟ್ಟು...
ಗುಂಡ: ಇಲ್ಲೇ ಇದೇ ಸರ್...
ಮತ್ತೆ ಯಾಕೆ ಹಾಕಿಲ್ಲ?
ಗುಂಡ: ಸರ್ ಅದು ನನ್ನ ಹೆಂಡತಿದು, ಗೊತ್ತಾಗದೆ ಆಕೆ ಮಾಸ್ಕ್ ತೆಗೆದುಕೊಂಡು ಬಂದೆ!
ಪೊಲೀಸ್: ಅದಕ್ಕೇನಂತೆ ಹಾಕೋ..
ಗುಂಡ: ಅವಳಿಗೆ ಅಂತ ತಂದಿದ್ದು ಸರ್. ಅದನ್ನು ಹಾಕಿಕೊಂಡ್ರೆ ಮಾತಾಡಲು ಆಗಲ್ಲ!

(ಸಂಗ್ರಹ) ರಾಜೀವ್ ಎಸ್. ಮಾಗಲ್
ಸಕಲೇಶಪುರ

ಗುಂಡ: ತರಗತಿಯಲ್ಲಿ ಯಾರ ಜೊತೆಗೂ ಜಗಳವಾಡಬಾರದು ಏಕೆ ಗೊತ್ತಾ?
ತಿಮ್ಮ: ಏಕೆ ಜಗಳವಾಡಬಾರದು?
ಗುಂಡ: ಯಾಕಂದ್ರೆ ಪರೀಕ್ಷೆಯಲ್ಲಿ ನಮ್ಮ ಹಿಂದೆ ಮುಂದೆ ಅಕ್ಕ ಪಕ್ಕ ಯಾರು ಕುಳಿತುಕೊಳ್ತಾರೋ ಏನೋ ಯಾರಿಗೆ ಗೊತ್ತು.

***

ಟೀಚರ್: ನನ್ನ ಪ್ರಶ್ನೆಗೆ ಸರಿಯಾಗಿ ಉತ್ತರಿಸುವವರು ಮನೆಗೆ ಹೋಗಬಹುದು (ಹೀಗೆ ಹೇಳುತ್ತಿರುವಾಗಲೇ ಗುಂಡ ತನ್ನ ಸ್ಕೂಲ್ ಬ್ಯಾಗ್ ಹೊರಗೆ ಎಸೆದ) ಬ್ಯಾಗ್ ಬೀಸಾಡಿದವರು ಯಾರು?
ಗುಂಡ: ನಾನೇ. ಸರಿಯಾದ ಉತ್ತರ ಕೊಟ್ಟಿದ್ದೀನಿ. ನಾನೀಗ ಮನೆಗೆ ಹೋಗಬಹುದಾ?

***

ತಿಮ್ಮ: ನನ್ನ ಟೈಮ್ ಸರಿ ಇಲ್ಲ ಕಣೋ.
ಗುಂಡ: ಅದಕ್ಕೆಲ್ಲಾ ಯಾರಾದ್ರೂ ಅಳ್ತಾರಾ? ವಾಚಿನ ಅಂಗಡಿಗೆ ಹೋಗಿ ರಿಪೇರಿ ಮಾಡಿಸಿದರಾಯ್ತು.

***

ಗುಂಡ: ರಾತ್ರಿ ತಡವಾಗಿ ಹೋಗಿದ್ದಕ್ಕೆ ಹೆಂಡತಿ ಬಾಗಿಲು ತೆಗೆಯಲಿಲ್ಲ. ಅಂಗಳದಲ್ಲಿ ಮಲಗಿದೆ.
ತಿಮ್ಮ: ಬೆಳಗಾದ ಮೇಲೆ ತೆಗೆದ್ರಾ?
ಗುಂಡ: ಬೆಳಗಾದಾಗ ಹಾಸಿಗೆಯಲ್ಲಿದ್ದೆ. ನನಗೆ ಮದುವೆಯೇ ಆಗಿಲ್ಲ ಅಂತ ನೆನಪಾಯ್ತು.

***

ತಿಮ್ಮ: ನೀನು ಗ್ರಹಣದ ಫಲ ನಂಬ್ತಿಯಾ?
ಗುಂಡ: ಇಲ್ಲ... ಇಲ್ಲ, ಖಂಡಿತ ನಂಬಲ್ಲ.
ತಿಮ್ಮ: ಮತ್ತೆ ಗ್ರಹಣಕ್ಕೆ ಮೊದಲೇ ಬೇಗ ಬೇಗ ಎಲ್ಲಾ ಕೆಲಸಗಳನ್ನು ಮಾಡಿ ಮುಗಿಸಿದ್ದಿಯಾ.
ಗುಂಡ: ಗ್ರಹಣವನ್ನು ನಂಬಲ್ಲ ಅಂದೆ ಅಷ್ಟೇ! ಹೆಂಡತಿಯ ಮಾತು ಕೇಳಲ್ಲ ಅಂದ್ನಾ?

***

ತಿಮ್ಮ: ಹಕ್ಕಿಗಳು ಯಾಕೆ ಆಕಾಶದಲ್ಲಿ ಹಾರಾಡ್ತವೆ?
ಗುಂಡ: ರಸ್ತೆಗಳಲ್ಲಿ ಟ್ರಾಫಿಕ್ ಜಾಮ್ ಜಾಸ್ತಿ ಇರುತ್ತಲ್ಲ. ಅದಕ್ಕೇ ಆಕಾಶದಲ್ಲಿ ಹಾರಾಡ್ತವೆ.

***

ಟೀಚರ್: ಯಾವ ಪಕ್ಷಿ ವೇಗವಾಗಿ ಹಾರುತ್ತದೆ?
ಗುಂಡ: ಯಾವ ಪಕ್ಷಿಗೆ ಅರ್ಜಂಟ್ ಇರುವದೋ ಅದೇ ಬಹಳ ವೇಗವಾಗಿ ಹಾರುತ್ತದೆ ಸರ್.

***

ಗುಂಡ: ನಿನ್ನನ್ನು ಮದುವೆಯಾಗಿದ್ದರಿಂದ ಒಂದು ದೊಡ್ಡ ಪ್ರಯೋಜನವಾಯಿತು.
ಪದ್ದಿ: ಯಾವ ಪ್ರಯೋಜನ ಆಯ್ತು?
ಗುಂಡ: ಈ ಜನ್ಮಗಳಲ್ಲಿ ಮಾಡಿದ ಪಾಪಗಳಿಗೆ ಇಲ್ಲೇ ಶಿಕ್ಷೆ ದೊರಕಿಬಿಟ್ಟಿತು.

***

ತಿಮ್ಮ: ಹಿಂದಿನ ಕಾಲದವರೆಲ್ಲ ಕಲ್ಲುಗಳನ್ನು ಉಜ್ಜಿ ಬೆಂಕಿ ಹಚ್ಚುತಿದ್ದರು.
ಗುಂಡ: ಅದೇನು ಮಹಾ? ಇತ್ತೀಚಿನ ದಿನಗಳಲ್ಲಿ ಬರೀ ಮಾತುಗಳಿಂದಲೇ ಬೆಂಕಿ ಹಚ್ಚುತ್ತಾರೆ.

***

ತಿಮ್ಮ: ಗೆಳತಿ ನನ್ನನ್ನು ಬಿಟ್ಟು ಹೋಗದೇ ಇರಲು ಏನು ಉಪಾಯ ಮಾಡಲಿ?
ಗುಂಡ: ಅವಳಿಂದ ಸಾಲದ ರೂಪದಲ್ಲಿ ದೊಡ್ಡ ಮೊತ್ತದ ಹಣವನ್ನು ತೆಗೆದುಕೊಂಡು ಬಿಡು.

(ಸಂಗ್ರಹ)
ಭೋಜರಾಜ ಸೊಪ್ಪಿಮಠ

